ವಿಶ್ವಕಪ್ ಗೆದ್ದ ಭಾರತ ಮಹಿಳಾ ಕಬಡ್ಡಿ ತಂಡದ ರಾಜ್ಯದ ಆಟಗಾರ್ತಿಗೆ ಐದು ಲಕ್ಷ ಬಹುಮಾನ : ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು : ಢಾಕಾದಲ್ಲಿ ನಡೆದ ಮಹಿಳಾ ಕಬಡ್ಡಿ ವಿಶ್ವಕಪ್ ಪಂದ್ಯಾವಳಿಯಲ್ಲಿ ಚಿನ್ನ ಗೆದ್ದ ಭಾರತ ತಂಡದ ರಾಜ್ಯದ ಆಟಗಾರ್ತಿ ಧನಲಕ್ಷ್ಮಿ ಹಾಗೂ ಚೈನಾದಲ್ಲಿ ನಡೆದ ಕಿರಿಯರ ಏಷ್ಯನ್ ಬ್ಯಾಡ್ಮಿಂಟನ್ ಸಿಂಗಲ್ ಚಾಂಪಿಯನ್ ಶಿಪ್ ನಲ್ಲಿ ಬೆಳ್ಳಿ ಗೆದ್ದ ಲಕ್ಷ್ಯ ರಾಜೇಶ್ ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸೌಧದ ತಮ್ಮ ಕಚೇರಿಯಲ್ಲಿ ಅಭಿನಂಧಿಸಿ ಸನ್ಮಾನ ಮಾಡಿ ತಲಾ ಐದು ಲಕ್ಷ ರೂ ಪ್ರೋತ್ಸಾಹ ಧನ ಘೋಷಿಸಿದರು.

ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷರಾದ ಗೋಂವಿಂದರಾಜು ಅವರ ನೇತೃತ್ವದಲ್ಲಿ ತಮ್ಮನ್ನು ಭೇಟಿಯಾದ ಇಬ್ಬರೂ ಪಟುಗಳಿಗೆ ಶುಭಾಶಯ ಕೋರಿದ ಮುಖ್ಯಮಂತ್ರಿಗಳು ರಾಜ್ಯಕ್ಕೆ ಮತ್ತು ದೇಶಕ್ಕೆ ಉತ್ತಮ ಹೆಸರು ತರುವ ನಿಟ್ಟಿನಲ್ಲಿ ಇನ್ನಷ್ಟು ಸಾಧನೆ ಮಾಡುವಂತೆ ಹಾರೈಸಿದರು.

ಇಬ್ಬರೂ ಪಟುಗಳಿಗೆ ತಲಾ ಐದು ಲಕ್ಷದ ಚೆಕ್ ವಿತರಿಸುವಂತೆ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿಗಳು ಸೂಚಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಬ್ಯಾಡ್ಮಿಂಟನ್ ಅಸೋಸಿಯೇಷನ್ ಕಾರ್ಯದರ್ಶಿ ರಾಜೇಶ್ ಮತ್ತು ತರಬೇತುದಾರರಾದ ಬಿ.ಎನ್.ಸುಧಾಕರ್ ಅವರುಗಳು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲೆ ರಾಹುಲ್ ಗಾಂಧಿ ಬೇಸರ

ಬೆಂಗಳೂರು : ಕರ್ನಾಟಕದಲ್ಲಿ ನಡೆಯುತ್ತಿರುವ 'ಗದ್ದುಗೆ ಗುದ್ದಾಟ'ದ ನಿಜವಾದ ಪ್ರಹಸನದಲ್ಲಿ ಗಂಭೀರ ಬೆಳವಣಿಗೆಯೊಂದು ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯಗೆ ದೊಡ್ಡ ಅಘಾತ ತಂದೊಡ್ಡಿದೆ.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ "ಅಸಹಕಾರ ಧೋರಣೆಗೆ ಬೇಸರಗೊಂಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಈ ಬೆಳವಣಿಗೆ ಬರುವ ದಿನಗಳಲ್ಲಿ, ಸಿದ್ದರಾಮಯ್ಯಗೆ ಮತ್ತಷ್ಟು ಸಮಸ್ಯೆ ತೊಂದೊಡ್ಡುವ ಸಾಧ್ಯತೆ ಇದೆ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆಗಿನ ಅಧಿಕಾರ ಹಸ್ತಾಂತರದ ಹೋರಾಟವನ್ನು ನಿರ್ಧರಿಸುವ ಮಟ್ಟಕ್ಕೂ ಹೋಗಬಹುದಾಗಿದೆ.

ಕಳೆದ ವಾರಾಂತ್ಯ ನಗರದಲ್ಲಿ ಬೀಡುಬಿಟ್ಟಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿ ಮಾಡಿ ನಿಮ್ಮ ಅಹವಾಲು ಏನಾದರೂ ಇದ್ದರೆ ಅವರಿಗೆ ಹೇಳಿ ಎಂದು ಸಿದ್ದರಾಮಯ್ಯಗೆ ರಾಹುಲ್ ಗಾಂಧಿ ಸಂದೇಶ ಕಳುಹಿಸಿದ್ದರು ಎಂದು ಮೂಲಗಳು ತಿಳಿಸಿವೆ. ಆದರೆ ಖರ್ಗೆರನ್ನು ಸಿದ್ದರಾಮಯ್ಯ ಭೇಟಿ ಆದರೂ, ತಾನು ರಾಹುಲ್ ಗಾಂಧಿ ಜೊತೆ ಮಾತ್ರ ಈ ವಿಚಾರ ಚರ್ಚಿಸಬೇಕು ಎಂದು ಹೇಳಿದ್ದಾರೆನ್ನಲಾಗಿದೆ.

ಈ ವಿಚಾರ ತಿಳಿದುಕೊಂಡ ರಾಹುಲ್ ಗಾಂಧಿ ತುಂಬಾ ಬೇಸರ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಇದರಿಂದಾಗಿಯೇ ಖರ್ಗೆ ಅಧಿಕಾರ ಹಸ್ತಾಂತರದ ವಿಚಾರದಲ್ಲಿ, "ಪಕ್ಷದ ಹೈಕಮಾಂಡ್ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ" ಎಂದು ಹೇಳಿದ್ದರು. ಖುದ್ದು ಎಐಸಿಸಿ ಅಧ್ಯಕ್ಷರು ಪಕ್ಷದ ಹೈಕಮಾಂಡ್ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳಿದಾಗ, ಹಾಗಾದರೇ ಕಾಂಗ್ರೆಸ್ ಹೈ ಕಮಾಂಡ್ ಯಾರು ಎಐಸಿಸಿ ಅಧ್ಯಕ್ಷರಾದ ಖರ್ಗೆಯವರಲ್ಲವೇ ಈ ವಿಚಾರ ಸಾರ್ವಜನಿಕ ವಲಯದಲ್ಲಿ, ಸಾಮಾಜಿ ಜಾಲತಾಣದಲ್ಲಿ ರಾಷ್ಟ್ರ ಮಟ್ಟದಲ್ಲಿ ಕೂಡ ಚರ್ಚೆಯಾಯಿತು. ಹಾಗೂ ವಿರೋಧ ಪಕ್ಷಗಳ ನಾಯಕರುಗಳಿಂದ ಟೀಕೆಗೆ ಗುರಿಯಾದ ಪಕ್ಷ ಅಡ್ಡಕತ್ತರಿಗೆ ಸಿಲುಕಿತು. ಈ ಹೇಳಿಕೆಗೆ ಕಾರಣವಾಗಿದ್ದು– ಸಿದ್ದರಾಮಯ್ಯನವರ ಅಸಹಕಾರ ಎಂದು ಮೂಲಗಳು ತಿಳಿಸಿವೆ.

ರಾಹುಲ್ ಗಾಂಧಿ ಅಸಮಾಧಾನಕ್ಕೆ ಇನ್ನೊಂದು ಕಾರಣ, ಸಿದ್ದರಾಮಯ್ಯರ ಪುತ್ರನ ವರ್ತನೆ. ಡಾ. ಯತೀಂದ್ರ ಸಿದ್ದರಾಮಯ್ಯ ಸರಕಾರದ ಕೆಲಸದಲ್ಲಿ ಮಾಡುತ್ತಿರುವ ಹಸ್ತಕ್ಷೇಪದ ಕುರಿತು ಕೆಲ ವರದಿ ರಾಹುಲ್ ಗಾಂಧಿ ಕೈ ತಲುಪಿದ್ದು, ಈ ಬೆಳವಣಿಗೆ ರಾಹುಲ್ ಗಾಂಧಿಗೆ ಅಸಮಾಧಾನ ತಂದಿದೆ ಎನ್ನಲಾಗಿದೆ. ಇದರ ಪರಿಣಾಮವಾಗಿ, ಪಕ್ಷದೊಳಗೆ ಸಿದ್ದರಾಮಯ್ಯನವರ ಸ್ಥಾನ ಮತ್ತಷ್ಟು ದುರ್ಬಲವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಲು ಸಿದ್ದರಾಮಯ್ಯ ಮಾನಸಿಕವಾಗಿ ತಯಾರಾಗಿದ್ದಾರೆ ಎಂದು ಅವರ ಗುಂಪಿನ ಕೆಲ ಸಚಿವರುಗಳು ಮುಗುಮ್ಮಾಗಿ ಹೇಳುತ್ತಿದ್ದಾರೆ.

ಒತ್ತಡ ತೀರಾ ಜಾಸ್ತಿ ಆದರೆ, ಫೆಬ್ರುವರಿ ಅಥವಾ ಮಾರ್ಚ್ ಮೊದಲ ವಾರದಲ್ಲಿ ಮುಂದಿನ ಬಜೆಟ್ ಮಂಡಿಸಿ ಆ ಮೇಲೆ ಕೆಳಗಿಳಿಯುವ ಸಾಧ್ಯತೆ ಇದೆ ಎಂಬುದು ಅವರ ವಾದ.

ಅದರ ಜೊತೆಗೆ ಕರ್ನಾಟಕದಲ್ಲಿ ಅತೀ ಹೆಚ್ಚು ದಿನ ಮುಖ್ಯಮಂತ್ರಿಯಾಗಿದ್ದ ದೇವರಾಜ್ ಅರಸ್ ಅವರ ದಾಖಲೆಯನ್ನು ಸಿದ್ದರಾಮಯ್ಯ ಡಿಸೆಂಬರ್ ಗೆ ಮುರಿಯುವ ಸಾಧ್ಯತೆ ಇದ್ದು, ಆ ನಂತರ ಕೂಡ ಅವರು ತಮ್ಮ ಸ್ಥಾನ ಬಿಟ್ಟುಕೊಡುವ ಸಾಧ್ಯತೆ ಎಂಬುದು ಅವರ ವಾದ.

ರಾಜಸ್ತಾನ, ಚತ್ತೀಸ್ ಗಢದಲ್ಲಿ ಮುಖ್ಯಮಂತ್ರಿ ಬದಲಾವಣೆಗೆ ಅವಕಾಶ ಕೊಡದೇ–ಅಶೋಕ್ ಗೆಹಲೋಟ್ ಮತ್ತು ಭೂಪೇಶ್ ಅವರಿಗೆ ಐದು ವರ್ಷದ ಅವಧಿ ನೀಡಿದ್ದ ಕಾಂಗ್ರೆಸ್ ಹೈ ಕಮಾಂಡ್–ಕರ್ನಾಟಕದಲ್ಲಿ ಒಂದು ಹೊಸ ಸಂಪ್ರದಾಯವನ್ನು ಹುಟ್ಟು ಹಾಕುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಹೈಕಮಾಂಡ್ ಅವಕಾಶ ಮಾಡಿಕೊಡಬೇಕು : ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್ ಆಗ್ರಹ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಪಕ್ಷ ಹೈಕಮಾಂಡ್ ಅವಕಾಶ ಮಾಡಿಕೊಡಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶಿವಕುಮಾರ್ ಅವರು ಹಗಲಿರುಳು ಶ್ರಮಿಸಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಅವರ ಶ್ರಮ ಸಾಕಷ್ಟು ಇದೆ. ಅದನ್ನು ಪರಿಗಣಿಸಬೇಕು. ಪಕ್ಷಕ್ಕಾಗಿ ಅವರು ಮಾಡಿರುವ ಕೆಲಸಕ್ಕೆ ಕೂಲಿ ಕೊಡಬೇಕು ಎಂದು ಅವರು ಒತ್ತಾಯಿಸಿದರು. ಕಾಂಗ್ರೆಸ್ ಪಕ್ಷದ ನಿಷ್ಠಾವಂತರು, ಪಕ್ಷದ ಕಟ್ಟಾಳು ಶಿವಕುಮಾರ್ ಅವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಬಾರದು. ಒಂದು ವೇಳೆ ಅವರೇ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗದಿದ್ದರೆ, ನಮ್ಮ ಸಮುದಾಯದ ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಹೋರಾಟ ಮಾಡುತ್ತೇವೆ ಎಂದರು.

ನಮ್ಮ ಸಮುದಾಯದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಪ್ರಬಲ ಆಕಾಂಕ್ಷಿಯಾಗಿ ಶಿವಕುಮಾರ್ ಮುಂಚೂಣಿಯಲ್ಲಿದ್ದಾರೆ. ಬೇರೆಯವರ ಪ್ರಸ್ತಾಪ ಬಂದಾಗ ಅದರ ಬಗ್ಗೆ ಪ್ರತಿಕ್ರಿಯಿಸುತ್ತೇವೆ ಪ್ರತಿಕ್ರಿಸುತ್ತೇವೆ ಎಂದರು.

ಶಿವಕುಮಾರ್ ಅವರು ವಿಧಾನಸಭೆ ಚುನಾವಣೆ ಕೇಳಿದಂತೆ ನಾಡಿನ ಜನರು ಅವರಿಗೆ ಪೆನ್ನು ಪೇಪರ್ ಕೊಟ್ಟಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಹಿಂದೆ ಐದು ವರ್ಷ ಮುಖ್ಯಮಂತ್ರಿ ಆಗಿದ್ದರು ಈಗ ಎರಡೂವರೆ ವರ್ಷ ಮುಖ್ಯಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡುತ್ತಾರೋ ಇಲ್ಲವೋ ಎಂಬ ಅನುವಾನ ಶುರುವಾಗಿದೆ. ಹಾಗಾಗಿ ಈ ಆಗ್ರಹ ಮಾಡುತ್ತಿದ್ದೇವೆ ಎಂದರು.

ಒಕ್ಕಲಿಗರ ಸಂಘದ ಎಲ್ಲಾ ನಿರ್ದೇಶಕರು, ಪದಾಧಿಕಾರಿಗಳು ಒಟ್ಟಾಗಿದ್ದು, ಸಂಘದ ಅಭಿವೃದ್ಧಿಗಾಗಿ ಉಳಿದಿರುವ ಇನ್ನೊಂದು ವರ್ಷದಲ್ಲಿ ಶ್ರಮಿಸುತ್ತೇವೆ ಎಂದು ಅವರು ಹೇಳಿದರು.

ಸಂಘದ ಮಾಜಿ ಅಧ್ಯಕ್ಷ ಬಿ.ಕೆಂಚಪ್ಪಗೌಡರು ಮಾತನಾಡಿ ಡಿ.ಕೆ. ಶಿವಕುಮಾರ್ ಅವರು ಚುನಾವಣೆಗೂ ಮುನ್ನ ಪೆನ್ನು ಪೇಪರ್ ಕೊಡಿ ಎಂದು ಕೇಳಿದ್ದರು. ಅದರಂತೆ ನಮ್ಮ ಸಮುದಾಯ ಮೊದಲ ಸ್ಥಾನದಲ್ಲಿ ನಿಂತು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿತ್ತು. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಶಿವಕುಮಾರ್ ಅವರ ಶ್ರಮ ಸಾಕಷ್ಟಿದೆ ಎಂದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು ಮುಖ್ಯಮಂತ್ರಿ ಆಗುವ ಪರಿಪಾಠವೂ ಇದೆ. ಸಿದ್ದರಾಮಯ್ಯ ಅವರು ಕಾಂಗ್ರೆಸ್ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಮುಖ್ಯಮಂತ್ರಿ ಆಗಿದ್ದು ನಮಗೂ ಸಂತೋಷ. ಆದರೆ ಡಿಕೆ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶ ತಪ್ಪಬಾರದು. ಕಷ್ಟಪಟ್ಟು ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಮುಂದೆ ಅಧಿಕಾರಕ್ಕೆ ಕಾಂಗ್ರೆಸ್ ಪಕ್ಷ ಬರಬೇಕಾದರೆ ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕು. ಒಂದು ವೇಳೆ ವಂಚನೆಯಾದರೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆ ಹಾಗೂ ನ್ಯಾಯಕ್ಕಾಗಿ ಹೋರಾಟವನ್ನು ಮಾಡುತ್ತೇವೆ ಎಂದರು. ಒಕ್ಕಲಿಗರ ಸಂಘದ ಇತಿಹಾಸದಲ್ಲಿ ಮೊದಲ ಬಾರಿಗೆ ಪದಾಧಿಕಾರಿಗಳ ಆಯ್ಕೆ ಅವಿರೋಧವಾಗಿ ನಡೆದಿದೆ. ಸಂಘದ ಅಭಿವೃದ್ಧಿಗೆ ಎಲ್ಲಾ 35 ನಿರ್ದೇಶಕರು ಒಗ್ಗಟ್ಟಿನಿಂದ ಶ್ರಮಿಸುತ್ತೇವೆ. ಸರ್ವ ಸದಸ್ಯರ ಸಭೆ ನಡೆಸುವುದು, ಬೈಲಾ ತಿದ್ದುಪಡಿ ಮಾಡುವುದು, ಎಲ್ಲಾ ಜನ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ವಸತಿ ನಿಲಯ ಸ್ಥಾಪಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ. ಕೃಷಿ ಕಾಲೇಜು, ಮತ್ತೊಂದು ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜು ಪ್ರಾರಂಭಿಸಲು ಮುಂದಾಗುತ್ತಿದ್ದೇವೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್ ಮಾತನಾಡಿ, ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರು ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶಿವಕುಮಾರ್ ಅವರ ಸೇವಾ ಹಿರಿತನ ಪರಿಗಣಿಸಿ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದರು.

ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಟಿ. ಕೋನಪ ರೆಡ್ಡಿ ಅವರು ಮಾತನಾಡಿ, ಕಾಂಗ್ರೆಸ್ ಪಕ್ಷದ ಕಟ್ಟಾಳು, ಶಿಸ್ತಿನ ಸಿಪಾಯಿ ಆಗಿರುವ ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು. ಹಳೆ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಲು ಒಕ್ಕಲಿಗ ಸಮುದಾಯವು ಕಾರಣ. ಇಡೀ ಸಮುದಾಯ ಶಿವಕುಮಾರ್ ಅವರ ಬೆಂಬಲಕ್ಕೆ ಬೆಂಬಲಕ್ಕೆ ಇದೆ. ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಸಿದ್ಧಾಂತವುಳ್ಳ ಪಕ್ಷ. ಹಾಗಾಗಿ ಮಾತಿಗೆ ತಪ್ಪುವುದಿಲ್ಲ ಎಂಬ ವಿಶ್ವಾಸವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಡಾ. ರೇಣುಕಾ ಪ್ರಸಾದ್, ಎಂ ಪುಟ್ಟಸ್ವಾಮಿ, ಸಹಾಯಕ ಕಾರ್ಯದರ್ಶಿ ಡಾ. ಡಿ. ಕೆ.ರಮೇಶ್, ಖಜಾಂಚಿ ಕೆ.ವಿ.ಶ್ರೀಧರ್, ಅಂಗದ ನಿರ್ದೇಶಕರಾದ ವೆಂಕಟರಾಮೇಗೌಡ, ಹನುಮಂತರಾಯಪ್ಪ, ಬಿ.ಪಿ.ಮಂಜೇಗೌಡ, ಜೆ ರಾಜು, ಲೋಕೇಶ್, ಅಶೋಕ್ ಜಯರಾಮ್, ಎಲುವಳ್ಳಿ ರಮೇಶ್, ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಅಧ್ಯಕ್ಷ ನಾಗರಾಜ್, ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

ಬ್ರಷ್ಡ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣದ ಮೂಲಕ ಪ್ರಮುಖ ರಸ್ತೆಗಳಲ್ಲಿ ಸುಧಾರಿತ ಪಾದಚಾರಿ ಮಾರ್ಗ ನಿರ್ಮಾಣಕ್ಕೆ ಆದ್ಯತೆ : ಡಿ.ಎಸ್.ರಮೇಶ್

ಬೆಂಗಳೂರು : ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಐಟಿಪಿಎಲ್ ರಸ್ತೆ ಅಗಲೀಕರಣ ಹಾಗೂ ಹೋಪ್ ಫಾರ್ಮ್ ಕೆಳಸೇತುವೆ ಅಭಿವೃದ್ಧಿ ಕಾಮಗಾರಿಯನ್ನು ಪೂರ್ವ ನಗರ ಪಾಲಿಕೆ ಆಯುಕ್ತರಾದ ಡಿ.ಎಸ್.ರಮೇಶ್ ಪರಿಶೀಲಿಸಿದರು.

ಐಟಿಪಿಲ್ ರಸ್ತೆ ಅಗಲೀಕರಣ ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಐಟಿಪಿಎಲ್ ಮುಖ್ಯರಸ್ತೆಯ ಇಂಡಿಯನ್ ಪೆಟ್ರೋಲ್ ಬಂಕ್ ಇಂದ ಶಾಂತಿನಿಕೇತನ ಅಪಾರ್ಟ್ಮೆಂಟ್ ವರೆಗಿನ ಸುಮಾರು 11ಕಿ.ಮೀ ಉದ್ದದ ರಸ್ತೆಯನ್ನು ಆರ್.ಎಂ.ಪಿ –2015ರಂತೆ 80 ಅಡಿಯಿಂದ 150 ಅಡಿಗೆ ರಸ್ತೆ ಅಗಲೀಕರಣದ ಸ್ಥಳವನ್ನು ಪರಿಶೀಲಿಸಿದ ಆಯುಕ್ತರು, ರಸ್ತೆ ಅಗಲೀಕರಣಕ್ಕೆ ಭೂಸ್ವಾಧೀನಗೊಂಡು ಪರಿತ್ಯಾಜನ ಪತ್ರ (Relinquish Deed) ಆಗಿರುವ ಸ್ವತ್ತುಗಳನ್ನು ಕೂಡಲೇ ನಗರ ಪಾಲಿಕೆ ಸ್ವಾಧೀನಕ್ಕೆ ಪಡೆಯಲು ಹಾಗೂ ಈ ರಸ್ತೆಯಲ್ಲಿನ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವು ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆಯುಕ್ತರು ಸೂಚಿಸಿದರು.

ಹೋಪ್ ಫಾರ್ಮ್ ಕೆಳಸೇತುವೆ ರಸ್ತೆ ಹೋಪ್ ಫಾರ್ಮ್ ಬಳಿ ನಡೆಯುತ್ತಿರುವ ಕೇಳಸೇತುವೆ ರಸ್ತೆ ಕಾಮಗಾರಿಯನ್ನು ಪರಿಶೀಲಿಸಿದ ಆಯುಕ್ತರು ಕಾಮಗಾರಿಯನ್ನು ಚುರುಕುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಬ್ರಷ್ಡ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣ ಪಾದಚಾರಿಗಳಿಗೆ ಸುರಕ್ಷಿತ, ಅನುಕೂಲಕರ ಹಾಗೂ ಉತ್ತಮ ಗುಣಮಟ್ಟದ ದೀರ್ಘಾವಧಿಯ ಸುಧಾರಿತ ಪಾದಚಾರಿ ಮಾರ್ಗ ನೀಡುವ ಗುರಿಯೊಂದಿಗೆ ಪೂರ್ವ ನಗರ ಪಾಲಿಕೆಯ ಪ್ರಮುಖ ರಸ್ತೆಗಳಲ್ಲಿ ಬ್ರಷ್ಡ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿರುವುದಾಗಿ ಆಯುಕ್ತರು ತಿಳಿಸಿದರು.

ಬ್ರಷ್ಡ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣ ಕೈಗೊಂಡಿರುವ ಪ್ರಮುಖ ರಸ್ತೆಗಳು

ಗ್ರಾಫೈಟ್ ಇಂಡಿಯಾ ರಸ್ತೆ

*ಕುಂದಹಳ್ಳಿ ಜಂಕ್ಷನ್ ಇಂದ ಐಟಿಪಿಎಲ್ ರಸ್ತೆ– ಉದ್ದ:1.5 ಕಿ.ಮೀ. ಚನ್ನಸಂದ್ರ ಮುಖ್ಯರಸ್ತೆ

*ಹೋಪ್‌ಫಾರಂ ಜಂಕ್ಷನ್ ಇಂದ ಪೂರ್ವ ನಗರ ಪಾಲಿಕೆ ಸರಹದ್ದು– ಉದ್ದ: 2 ಕಿ.ಮೀ. ದಿನ್ನೂರು ಮುಖ್ಯರಸ್ತೆ

*ಕಾಡುಗೋಡಿ ಟ್ರೀ ಪಾರ್ಕ್ (ಸುಮಧುರ ಅಪಾರ್ಟ್‌ಮೆಂಟ್ ಬಳಿ) ಇಂದ ವಿಪ್ರೋ ಜಿ.ಈ ಹೆಲ್ತ್‌ಕೇರ್–ಉದ್ದ: 1 ಕಿ.ಮೀ

*ಇಪಿಐಪಿ ಪ್ರದೇಶ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ

ದೊಡ್ಡನೆಕ್ಕುಂದಿ ವ್ಯಾಪ್ತಿಯ ಇಪಿಐಪಿ ಪ್ರದೇಶದಲ್ಲಿ ಪಾದಚಾರಿ ಮಾರ್ಗ ಅತಿಕ್ರಮಣ ತೆರವು ಕಾರ್ಯವನ್ನು ಕೈಗೊಳ್ಳಲಾಯಿತು.ಈ ಪ್ರದೇಶದಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಆರಂಭಿಸಿದ್ದು, ಒತ್ತುವರಿ ತೆರವು ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ಆಯುಕ್ತರು ತಿಳಿಸಿದರು.

ಇಪಿಐಪಿ ಏರಿಯಾ ಪ್ರದೇಶದ ರಸ್ತೆ ಸಂಖ್ಯೆ–3, ದೊಡ್ಡನೆಕ್ಕುಂದಿಯಲ್ಲಿ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು. ಪಾದಚಾರಿ ಮಾರ್ಗಕ್ಕೆ ಅಡ್ಡಿಯಾಗಿದ್ದ ಸುಮಾರು 500 ಮೀಟರ್‌ಗಳಷ್ಟು ಉದ್ದದ ಅತಿಕ್ರಮಣವನ್ನು ತೆರವುಗೊಳಿಸಲಾಗಿದೆ.

25ಕ್ಕೂ ಹೆಚ್ಚಿನ ಪೆಟ್ಟಿಗೆ ಹಾಗೂ ಶಾಶ್ವತ ಮಳಿಗೆಗಳನ್ನು ತೆರವು ಮಾಡಲಾಗಿದೆ. ಇವುಗಳಲ್ಲಿ ಬಹುತೇಕವು ಫುಡ್ಕಾರ್ಟ್‌ಗಳು, ಪರ್ಮನೆಂಟ್ ಸ್ಟ್ರಕ್ಚರ್ ಅಂಗಡಿಗಳಾಗಿದ್ದು ಎರಡು ಕ್ರೇನ್, ಟ್ರ್ಯಾಕ್ಟರ್ ಮತ್ತು ಸಿಬ್ಬಂದಿ ಬಳಸಿ ಕಾರ್ಯಾಚರಣೆ ನಡೆಸಲಾಯಿತು.

ಕಾರ್ಯಾಚರಣೆ ಮುಂದುವರೆದ ಭಾಗವಾಗಿ ನಾಳೆ ಇಪಿಐಪಿ ಪ್ರದೇಶದ 1ನೇ ಎ ಅಡ್ಡರಸ್ತೆಯಲ್ಲಿ ತೆರವು ಕಾರ್ಯವನ್ನು ಕೈಗೊಳ್ಳಲು ಯೋಜಿಸಲಾಗಿದೆ. ಅತಿಕ್ರಮಣ ತೆರವುಗೊಳಿಸಿದ ಸ್ಥಳದಲ್ಲಿ ಸೌಂದರೀಕರಣದ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ.

ಪರಿಶೀಲನೆಯಲ್ಲಿ ಅಪರ ಆಯುಕ್ತರು (ಅಭಿವೃದ್ಧಿ) ಲೋಖಂಡೆ ಸ್ನೇಹಲ್ ಸುಧಾಕರ್, ಮುಖ್ಯ ಅಭಿಯಂತರರಾದ ಲೋಕೇಶ್, ಕಾರ್ಯಪಾಲಕ ಅಭಿಯಂತರರಾದ ಉದಯ್ ಚೌಗಲೆ, ಭೂಪ್ರದ, ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

Godrej Housing Finance Limited

Godrej | HOUSING FINANCE
A Godrej Capital Company

ಸಾರ್ವಜನಿಕ ಪ್ರಕಟಣೆ

2021ರ ಫೆಬ್ರುವರಿ 17ರಂದು ಪ್ರಕಟವಾಗಿರುವ ಹಾಗೂ ಕಾಲಾನುಸಾರ ಪರಿಷ್ಕರಿಸಲ್ಪಡುವ ಮಾಸ್ಟರ್ ಡೈರೆಕ್ಷನ್ - ನಾನ್-ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನಿ - ಹೌಸಿಂಗ್ ಫೈನಾನ್ಸ್ ಕಂಪನಿ (ರಿಸರ್ವ್ ಬ್ಯಾಂಕ್) ನಿರ್ದೇಶನಗಳು, 2021ರ ಪ್ಯಾರಾಗ್ರಾಫ್ 93ರ ಅನ್ವಯವಾಗಿ, 'ಗೋಡ್ರೆಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್' (Godrej Housing Finance Limited) ಇಂದ ಸಾರ್ವಜನಿಕ ಪ್ರಕಟಣೆ ನೀಡಲಾಗುತ್ತದೆ.

ಗೋಡ್ರೆಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್("ಕಂಪನಿ" ಅಥವಾ "GHFL") ಎಂಬುದು ಕಂಪನಿಗಳ ಕಾಯ್ದೆ, 2013ರ ಅನ್ವಯವಾಗಿ ನೋಂದಾಯಿತ ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿದ್ದು (CIN: U65100MH2018PLC313359), ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (COR. No: DOR-00184) ಯಲ್ಲಿ ನಿಕ್ಷೇಪ ಸ್ವೀಕರಿಸದ ನಾನ್-ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನಿ - ಹೌಸಿಂಗ್ ಫೈನಾನ್ಸ್ ಕಂಪನಿ ("NBFC-HFC") ಯಾಗಿ ನೋಂದಾಯಿತವಾಗಿದೆ. GHFL ನ ನೋಂದಾಯಿತ ಕಚೇರಿಯ ವಿಳಾಸ, ಗೋದ್ರೇಜ್ ಒನ್, ಪಿರೋಜ್‌ಷಾನಗರ್, ಈಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ವಿಖ್ರೋಲಿ (ಪೂ), ಮುಂಬೈ - 400079, ಮಹಾರಾಷ್ಟ್ರ.

ಈ ಮೂಲಕ ತಿಳಿಸಲಾಗುವುದು ಎಂಬುದೇನೆಂದರೆ, ಸಂಸ್ಥೆಯು ಕರ್ನಾಟಕ ರಾಜ್ಯದ ಬೆಂಗಳೂರು - 560 092 ರ ಕೊಡಿಗೆಹಳ್ಳಿ ಮೇನ್ ರೋಡ್, ಜಿ.ವಿ. ಟವರ್ಸ್, ಪ್ರಥಮ ಮಹಡಿ, ಕಚೇರಿ ನಂ. 68-72ರಲ್ಲಿ ಸ್ಥಿತಿಯಲ್ಲಿರುವ ತನ್ನ ಶಾಖಾ ಕಚೇರಿಯನ್ನು ಕಾರ್ಯನಿರ್ವಹಣಾ ಕಾರಣಗಳಿಂದಾಗಿ ಈ ಸೂಚನೆಯ ದಿನಾಂಕದಿಂದ 3 ತಿಂಗಳ ಒಳಗಾಗಿ, ಅದೇ ಜಿ.ವಿ. ಟವರ್ಸ್, ನೆಲ ಮಹಡಿ, ಕಚೇರಿ ನಂ. 68-72, ಕೊಡಿಗೆಹಳ್ಳಿ ಮೇನ್ ರೋಡ್, ಬೆಂಗಳೂರು - 560 092ಕ್ಕೆ ಸ್ಥಳಾಂತರಿಸಲಾಗುತ್ತದೆ.

ಏನೇ ಪ್ರಶ್ನೆಗಳಿದ್ದರೂ ಗ್ರಾಹಕರು customercare@godrejcapital.com ಇಮೇಲ್ ಮೂಲಕ ಸಂಪರ್ಕಿಸಬಹುದು.

ಈ ಸಂಬಂಧ ಯಾವುದೇ ಸ್ಪಷ್ಟೀಕರಣ ಅಥವಾ ವಿಚಾರಣೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 (ಮೂವತ್ತು) ದಿನಗಳೊಳಗೆ ಕಂಪನಿಯ ನೋಂದಾಯಿತ ಕಚೇರಿಯ, ಮುಖ್ಯ ಅನುಸರಣಾ ಅಧಿಕಾರಿ, ಶ್ರೀ ಯೋಗೇಶ್ ಜೈನ್ ಅವರಿಗೆ ಅಥವಾ compliance@godrejhf.com ಗೆ ಕಳುಹಿಸಬಹುದು.

Sd/-
ಗೋಡ್ರೆಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ

ಸ್ಥಳ: ಮುಂಬೈ
ದಿನಾಂಕ: 28-11-2025

SURYODAY A BANK OF SMILES

ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ನೋಂ. & ಕಾರ್ಪೊ. ಕಚೇರಿ : 1101 ಶಾರದಾ ಟೆರೇಸಸ್, ಪ್ಲಾಟ್ 65, ಪ್ಲಾಟ್ 65, ಸೆಕ್ಟರ್–11 ಸಿಬಿಡಿ ಬೆಲಾಪುರ, ನವಿ ಮುಂಬೈ – 400614. CIN: L65923MH2008PLC261472.

ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002 ರ ಸೆಕ್ಷನ್ 13 (2) ರ ಅಡಿಯಲ್ಲಿ

ಕೆಳಸಹಿದಾರರು ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿ ಕಾಯ್ದೆ, 2002 ರ ಅಡಿಯಲ್ಲಿ ಮೆ. ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಎಸ್‌ಎಸ್‌ಎಫ್‌ಬಿಎಲ್") ನ ಅಧಿಕೃತ ಅಧಿಕಾರಿಯಾಗಿದ್ದು, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13(12) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಈ ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ಡಿಮ್ಯಾಂಡ್ ನೋಟೀಸ್‌ಗಳನ್ನು ಹೊರಡಿಸಿದ್ದಾರೆ, ಈ ಕೆಳಗಿನ ಸಾಲಗಾರರು(ಗಳು), ಸಹ–ಸಾಲಗಾರರು(ಗಳು), ಖಾತರಿದಾರರು(ಗಳು) ಸಂಬಂಧಿತ ಸೂಚನೆಗಳನ್ನು ನೀಡಿದ ದಿನಾಂಕದಿಂದ 60 ದಿನಗಳ ಒಳಗೆ ಮತ್ತು ಕೆಳಗೆ ನೀಡಲಾದ ಸೂಚನೆಯನ್ನು ಪ್ರಕಟಿಸುವ ಮೂಲಕ ಮತ್ತು ನಿಮ್ಮ ಮೇಲೆ ಪರ್ಯಾಯ ಸೇವೆಯ ರೀತಿಯಲ್ಲಿ ಕಂಪನಿಗೆ ತಮ್ಮ ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲು ಸೂಚನೆ ನೀಡಿದ್ದಾರೆ. ಸಾಲದ ಸರಿಯಾದ ಮರುಪಾವತಿಗೆ ಭದ್ರತೆಯಾಗಿ, ಈ ಕೆಳಗಿನ ಸುರಕ್ಷಿತ ಆಸ್ತಿ(ಗಳನ್ನು) ಸದರಿ ಸಾಲಗಾರರು, ಸಹ–ಸಾಲಗಾರರು, ಖಾತರಿದಾರರು ಕ್ರಮವಾಗಿ ಎಸ್‌ಎಸ್‌ಎಫ್‌ಬಿಎಲ್ ಗೆ ಅಡಮಾನ ಇಟ್ಟಿದ್ದಾರೆ.

ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	07.10.2025
227000005359, 1. ಶ್ರೀಮತಿ. ಅನಿತಾ ಕೋಂ ಪರಮೇಶ, 2. ಶ್ರೀ. ಪರಮೇಶ ಬಿನ್ ಗಿಡ್ಡಯ 3. ಶ್ರೀಮತಿ. ಹನುಮಮ್ಮ ಕೋಂ ಗಿಡ್ಡಯ	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 7,70,777/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರ ಆಸ್ತಿಯ ಇ–ಸ್ವತ್ತು ಖಾತಾ 9 ಮತ್ತು 11ಎ, ಆಸ್ತಿ ಸಂಖ್ಯೆ 361, ಪಿಐಡಿ ಸಂಖ್ಯೆ 151600701000100367, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ 9.144 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 9.144 ಮೀಟರ್, ಈ ಆಸ್ತಿ ಕಡಪಿನಕೋಟೆ ಗ್ರಾಮ, ಹಳೆಕೋಟೆ ಹೋಬಳಿಯ, ಹೊಳೆನರಸೀಪುರ ತಾಲ್ಲೂಕು, ಮತ್ತು ಹಾಸನ ಜಿಲ್ಲೆಯಲ್ಲಿದೆ ಮತ್ತು ಚೆಕ್ಕುಬಂದಿ: ಪೂರ್ವಕ್ಕೆ: ಶ್ರೀ ಮಂಜುನಾಥ ಅವರ ಮನೆ, ಪಶ್ಚಿಮಕ್ಕೆ: ಶ್ರೀಮತಿ ಲಕ್ಷಮ್ಮ ಅವರ ಮನೆ, ಉತ್ತರಕ್ಕೆ: ಶ್ರೀ ಸ್ವಾಮಿ ಅವರ ಮನೆ, ದಕ್ಷಿಣಕ್ಕೆ: ರಸ್ತೆ.		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
237000000078, 1. ಶ್ರೀ. ಬಸಯ್ಯ ಗುರುಪಾದಯ್ಯ ಸುಂಕದ ಬಿನ್ ಗುರುಪಾದಯ್ಯ, 2. ಶ್ರೀಮತಿ. ಲಕ್ಷ್ಮೀದೇವಿ ಸುಂಕದಮಠ ಕೋಂ ಗುರುಪಾದಯ್ಯ ಸುಂಕದಾ.	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 7,57,280/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಸ್ಥಿರ ಸೈಟ್ ಸಂಖ್ಯೆ 04, ಮೌಲ್ಯಮಾಪನ ಸಂಖ್ಯೆ 44/1, ಪಿಐಡಿ ಸಂಖ್ಯೆ 4–5–564–44/1, ಅಳತೆ: ಭೂಪ್ರದೇಶ: 6.096012 ಮೆಟ್ಸ್ ಮತ್ತು ನೈಸರ್ಗಿಕ ಪ್ರದೇಶ:–9.144018 ಮೆಟ್ಸ್, ಅಂದರೆ 55.7418 ಚದರ ಮೀಟರ್, ಕರ್ನಾಟಕದ ರಾಣೆಬೆನ್ನೂರಿನಲ್ಲಿರುವ ಅಡವಿ ಆಂಜನೇಯ ಬಡಾವಣೆಯಲ್ಲಿ ಇದೆ. ಚೆಕ್ಕುಬಂದಿ: ಪೂರ್ವಕ್ಕೆ: ಸೈಟ್ ಸಂಖ್ಯೆ 05, ಪಶ್ಚಿಮಕ್ಕೆ: ಸೈಟ್ ಸಂಖ್ಯೆ 03, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸೈಟ್ ಸಂಖ್ಯೆ 35.		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
239000000649, 1. ಶ್ರೀ. ಮಾದಪ್ಪ ಬಿನ್ ಶಿವಮಹದೇವಶೆಟ್ಟಿ, 2. ಶ್ರೀಮತಿ. ಸಿದ್ದಮ್ಮ ಕೋಂ ಲೇಟ್ ಶಿವ ಮಹದೇವ ಶೆಟ್ಟಿ	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 2,72,465/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಮಂಗಳೂರು ಟೈಲ್ಡ್ ಮನೆ ಆಸ್ತಿಯ ಸಂಖ್ಯೆ 56, ಇ–ಖಾತಾ ಸಂಖ್ಯೆ 150800200600100074, ಬೇರಂಬಾಡಿ ಗ್ರಾಮ ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆಯಲ್ಲಿದೆ. ಬೇರಂಬಾಡಿ ಗ್ರಾಮ ಪಂಚಾಯತ್ ಅವಧಿಯ ವ್ಯಾಪ್ತಿಯಲ್ಲಿದೆ, ಅಳತೆ ಪೂ–ಪ–7.62 ಮೀಟರ್ ಮತ್ತು ಯು–ದ–9.14 ಮೀಟರ್ ಮತ್ತು ಒಟ್ಟು ಅಳತೆ 69.64 ಚದರ ಮೀಟರ್ ಕಟ್ಟಡದ 69.64 ಚದರ ಮೀಟರ್ ಮತ್ತು ಅದರಲ್ಲಿರುವ ಎಲ್ಲಾ ಸುಧಾರಣೆಗಳು, ಚೆಕ್ಕುಬಂದಿ: ಪೂರ್ವಕ್ಕೆ: ದಾರಿ, ಪಶ್ಚಿಮಕ್ಕೆ: ಕನ್ಸರ್ವೆನ್ಸಿ, ಉತ್ತರಕ್ಕೆ: ಕನ್ಸರ್ವೆನ್ಸಿ, ದಕ್ಷಿಣಕ್ಕೆ: ನಂಜಶೆಟ್ಟಿಯ ಉಷಾ ಅವರ ಮನೆ.		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 6,89,174/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 8,98,300.28/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	06.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 5,07,443.00/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 10,47,691.79/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 10,47,691.79/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 7,42,863/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	06.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 3,54,498/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	06.10.2025
[illegible]	ಎನ್‌ಪಿಎ ದಿನಾಂಕ	12.08.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 2,95,495/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 5,08,900/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		
ಸಾಲಗಾರ / ಸಹ–ಸಾಲಗಾರ / ಖಾತರಿದಾರರ ಹೆಸರು	ಡಿಮ್ಯಾಂಡ್ ನೋಟಿಸ್ ದಿನಾಂಕ	08.10.2025
[illegible]	ಎನ್‌ಪಿಎ ದಿನಾಂಕ	08.09.2025
	ಒಟ್ಟು ಬಾಕಿ ಮೊತ್ತ ರೂ.ಗಳಲ್ಲಿ	ರೂ. 10,87,812.23/– 22.09.2025 ರಂತೆ
ಭದ್ರತಾ ಆಸ್ತಿ(ಗಳು) / ಸ್ಥಿರ ಆಸ್ತಿ (ಗಳ) ವಿವರ: [illegible]		

ಸ್ಥಳ: ಕರ್ನಾಟಕ
ದಿನಾಂಕ: 23.11.2025

ಅಧಿಕೃತ ಅಧಿಕಾರಿ
ಸೂರ್ಯೋದಯ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್